ಇಂಗ್ಲಿಷ್ ಮೂಲ: ಸ್ಟೀಫನ್ ಲೀಕಾಕ್
**ಕನ್ನಡಕ್ಕೆ: ಸಚೇತನ ಭಟ್**

ನನಗೆ ಬ್ಯಾಂಕಿಗೆ ಹೋಗುವುದೆಂದರೆ ಕಿರಿಕಿರಿ. ಇಂಥದ್ದೆ ಅನ್ನುವಂತಿಲ್ಲ, ಬ್ಯಾಂಕಿಗೆ ಸಂಬಂಧಿಸಿದಂತೆ ಎಲ್ಲವೂ ಕಿರಿಕಿರಿಯೆ. ಬ್ಯಾಂಕಿನಲ್ಲಿನ ಕ್ಲರ್ಕ್‌ಗಳು, ಅವರು ಕುಳಿತಿರುವ ಕೌಂಟರ್‌ಗಳು, ಅವರು ಎಣಿಸುವ ಹಣ... ಒಟ್ಟಿನಲ್ಲಿ ಬ್ಯಾಂಕಿನಲ್ಲಿ ನಡೆಯುವ ಪ್ರತಿಯೊಂದು ನನ್ನಲ್ಲಿ ಅಸಾಧ್ಯವಾದ ರಗಳೆಯನ್ನುಂಟು ಮಾಡುತ್ತವೆ. ಇದೇ ಕಾರಣಕ್ಕೆ ಇರಬಹುದು, ಬ್ಯಾಂಕಿನ ಹೊಸ್ತಿಲನ್ನು ದಾಟಿ ಒಳಗಡಿಯಿಟ್ಟು ಏನಾದರೂ ವ್ಯವಹಾರ ಶುರು ಮಾಡೋಣ ಎನ್ನುವಷ್ಟರಲ್ಲಿ ನಾನೊಬ್ಬ ಬೇಜವಾಬ್ದಾರಿಯುಳ್ಳವನೂ, ಅತ್ಯಂತ ಮೂರ್ಖನೂ ಆದ ವ್ಯಕ್ತಿಯಂತೆ ವರ್ತಿಸುವುದಕ್ಕೆ ಶುರು ಮಾಡುತ್ತೇನೆ.

ಇದೆಲ್ಲ ನನಗೆ ಗೊತ್ತಿದುದರಿಂದಲೇ ನಾನು ಇಷ್ಟೂ ದಿನ ಬ್ಯಾಂಕಿನಿಂದ ದೂರವಿದ್ದುದು. ಆದರೆ ಇತ್ತೀಚೆಗಷ್ಟೆ ನನ್ನ ಸಂಬಳ ಸುಮಾರು ಎಂಟುನೂರು ರೂಪಾಯಿಗಳಷ್ಟು ಹೆಚ್ಚಾದುದರಿಂದ ಮತ್ತು ಈ ಹೆಚ್ಚಿಗೆಯಾದ ಮೊತ್ತವನ್ನ ಇರಿಸಲಿಕ್ಕೆ ಎಲ್ಲಿಯೂ ಸರಿಯಾದ ಜಾಗ ಸಿಗದಿದ್ದರಿಂದ ನಾನು ಅನಿವಾರ್ಯವಾಗಿ ಬ್ಯಾಂಕಿಗೆ ಹೋಗಲೇ ಬೇಕಾಯಿತು.

ಬ್ಯಾಂಕಿನೊಳಗೆ ಕಾಲಿರಿಸಿದ್ದೇ ಅಲ್ಲಿ ಕೌಂಟರಿನಲ್ಲಿ ಸಾಲಾಗಿ ಕುಳಿತಿದ್ದ ಕ್ಲರ್ಕ್‌ಗಳನ್ನೆಲ್ಲ ದಿಟ್ಟಿಸಿದೆ. ನನ್ನ ಪ್ರಕಾರ ಹೊಸತಾಗಿ ಅಕೌಂಟ್ ತೆರೆಯುವ ಎಲ್ಲರೂ ಈ ಕ್ಲರ್ಕ್‌ಗಳನ್ನ ಭೇಟಿಯಾಗಲೇ ಬಾರದು; ನೇರವಾಗಿ ಬ್ಯಾಂಕ್‌ನ ಮ್ಯಾನೇಜರ್‌ರನ್ನು ಭೇಟಿಯಾಗ ತಕ್ಕದ್ದು.

ನಾನು, 'ಅಕೌಂಟೆಂಟ್' ಎಂದು ಬೋರ್ಡು ನೇತಾಕಿದ್ದ ಕೌಂಟರಿನತ್ತ ನಡೆದೆ. ಕೌಂಟರಿನ ಹಿಂದೆ ಉದ್ದನೆಯ ಕ್ಲರ್ಕ್ ಒಬ್ಬ ತಣ್ಣನೆಯ ಭೂತದಂತೆ ಕುಳಿತಿದ್ದ. ಅವನ ಮುಖ ನೋಡಿದ್ದೇ ನನಗೆ ಕಿರಿಕಿರಿಯಾಗತೊಡಗಿತು. ಬಹುಶಃ ಇದೇ ಕಾರಣಕ್ಕೆ ನನ್ನ ಧ್ವನಿ ಅಗತ್ಯಕ್ಕಿಂತ ಹೆಚ್ಚೇ ದುಃಖಮಯವಾಗಿದ್ದಂತೆ ತೋರಿತು.

"ನಾನು ಮ್ಯಾನೇಜರ್‌ರನ್ನು ನೋಡಬಹುದೇ?'' ನಾನು ಇಷ್ಟನ್ನೇ ಕೇಳಿದ್ದರೆ ಚೆನ್ನಾಗಿತ್ತೇನೋ. ಆದರೆ ನನಗೆ ಅರಿವಿಲ್ಲದಂತೆ ನಾನು ಇನ್ನೊಂದು ಶಬ್ದ ಸೇರಿಸಿದ್ದೆ – ''ಅವರನ್ನೊಬ್ಬರನ್ನೇ...'' ನಿಜಕ್ಕೂ ಈ ಇನ್ನೊಂದು ಶಬ್ದ ಸೇರಿಸಿದ್ದು ಯಾಕೆ ಎನ್ನುವುದು ನನಗೂ ಸಹ ಗೊತ್ತಿಲ್ಲ.

"ಖಂಡಿತಾ." ಉದ್ದಕೆ, ತಣ್ಣಗೆ ಕೌಂಟರಿನ ಹಿಂದೆ ಕುಳಿತಿದ್ದ ಭೂತ ಒಳ ಹೋಗಿ ಮ್ಯಾನೇಜರ್‌ನನ್ನು ಕರೆತಂದಿತು.

ಈ ಮ್ಯಾನೇಜರ್ ಎನ್ನುವ ಮನುಷ್ಯ ಈಗ ತಾನೇ ಗೋರಿಯೊಳಗಿನಿಂದ ಎದ್ದು ಬಂದಿದ್ದಾನೆಯೋ ಎನ್ನುವಷ್ಟು ತಣ್ಣಗೆ, ನಿರ್ವಿಕಾರವಾಗಿದ್ದ.

"ಈ ಬ್ಯಾಂಕಿನ ಮ್ಯಾನೇಜರ್ ತಾವೇನೊ?'' ನಾನು ಪ್ರಶ್ನಿಸಿದೆ. ದೇವರಾಣೆ ನನಗೆ ಅದರಲ್ಲಿ ಯಾವುದೇ ಸಂದೇಹ ಇಲ್ಲದಿದ್ದರೂ, ಪ್ರಶ್ನೆ ನನ್ನ ಬಾಯಿಯಿಂದ ಬುಳಕ್ಕನೆ ಹೊರ ಬಂದಿತ್ತು.

"ಹೌದು" ಅವನು ಉತ್ತರಿಸಿದ.

"ನಾನು ತಮ್ಮ ಜೊತೆ ಮಾತನಾಡಬಹುದೇ?" ನಾನು ಕೇಳಿದೆ. ಈ ಬಾರಿ 'ತಮ್ಮೊಬ್ಬರ ಜೊತೆಗೆ ಮಾತ್ರ' ಎನ್ನುವ ಮಾತನ್ನು ನಾನು ಸೇರಿಸಿಲ್ಲವಾದರೂ ಅದು ಮ್ಯಾನೇಜರ್‌ಗೆ ಈ ಮೊದಲೇ ತಿಳಿದಂತೆ ಇತ್ತು.

ಮ್ಯಾನೇಜರ್ ನನ್ನನ್ನು ಅತ್ಯಂತ ಎಚ್ಚರಿಕೆಯಿಂದ ನೋಡುತ್ತಿರುವಂತೆ ಭಾಸವಾಯಿತು. ಬಹುಶಃ ನಾನು ಯಾವುದೋ ರಹಸ್ಯ ವಿಷಯವನ್ನ ಹೇಳಲಿಕ್ಕೆ ಬಂದಿದ್ದೇನೆ ಎಂದು ಆತ